ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ,

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

E-mail:eepwdspecialmysuru@gmail.com Phone No. & Fax No. 0821 2492297

**ನಂ.ಕಾಇಂ:ಲೋಇ:ವಿವಿ:ಮೈ:ಸಇಂ–2:ಕಟ್ಟಡ ಸುರಕ್ಷತೆ:2022–23** 2275-76 **ದಿನಾಂಕ ;** 15/12/22

**ರವರಿಗೆ**

ಕಾರ್ಯದರ್ಶಿಗಳು
ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಸ್ಕೂಲ್,
ಹೂಟಗಳ್ಳಿ 2ನೇ ಹಂತ,
ಮೈಸೂರು.

**ಮಾನ್ಯರೇ,**

ವಿಷಯ: ಮೈಸೂರು ನಗರದ ಹೂಟಗಳ್ಳಿ 2ನೇ ಹಂತದಲ್ಲಿರುವ ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಶಾಲಾ ಕಟ್ಟಡಕ್ಕೆ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ:
1. ತಮ್ಮ ಮನವಿ ಪತ್ರ ದಿನಾಂಕ: 07.11.2022
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ಇವರ ಕಛೇರಿ ಪತ್ರ ಸಂಖ್ಯೆ: 972 ದಿ: 03.12.2022
3. ಸರ್ಕಾರದ ಅಧೀನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆರವರ ಸುತ್ತೋಲೆ ಸಂಖ್ಯೆ: ಇಡಿ:43:ಪಿಜಿಸಿ:2022 ದಿನಾಂಕ: 18.05.2022

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಾರ್ಯದರ್ಶಿಗಳು, ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಸ್ಕೂಲ್, ಹೂಟಗಳ್ಳಿ 2ನೇ ಹಂತ, ಮೈಸೂರುರವರು, ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತಾರೆ ಎಂದು ತಿಳಿಸಿ, ಸದರಿ ಶಾಲಾ ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸಿರುತ್ತಾರೆ.

ಮೈಸೂರಿನ ಹೂಟಗಳ್ಳಿ 2ನೇ ಹಂತದಲ್ಲಿರುವ ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಶಾಲಾ ಕಟ್ಟಡವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರು ರವರು ಶಿಕ್ಷಣ ಇಲಾಖೆಯ ಅಧಿಕಾರಿಗಳೊಂದಿಗೆ ದಿನಾಂಕ:18.11.2022 ರಂದು ಜಂಟಿಯಾಗಿ ಪರಿವೀಕ್ಷಿಸಲಾಗಿದ್ದು, ಕಟ್ಟಡವು ಸುಸ್ಥಿತಿಯಲ್ಲಿರುವುದನ್ನು ಗಮನಿಸಲಾಗಿರುತ್ತದೆ. ಕಟ್ಟಡವು ನೆಲ + ಮೂರು ಅಂತಸ್ತುಗಳನ್ನು ಒಳಗೊಂಡಿರುತ್ತದೆ. ಸದರಿ ಕಟ್ಟಡದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಮುಂದುವರೆದು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1 ವಿಶೇಷ ಉಪವಿಭಾಗ, ಮೈಸೂರುರವರು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, **ಕರ್ನಾಟಕ ಮೆಟೀರಿಯಲ್ ಟೆಸ್ಟ್ ಹೌಸ್ ಪ್ರೈ.ಲಿ., ಬಸವೇಶ್ವರ ಲೇಔಟ್, ಬೆಂಗಳೂರು–94** ರವರು ಸದರಿ ಕಟ್ಟಡದ ಎನ್.ಡಿ.ಟಿ ಪರೀಕ್ಷೆ ಮಾಡಿರುವ ವರದಿಯನ್ನು ನೀಡಿರುತ್ತಾರೆ.

- **Ultrasonic Pulse Velocity Test**

Conducting Ultrasonic pulse velocity test for compressive strength of in-situ concrete on Columns, Beams and Slab at Critical points using **"PUNDIT 6" (Portable ultrasonic non-destructive Digital indicating Tester)** ಉಪಕರಣದಲ್ಲಿ ಪರೀಕ್ಷೆಯನ್ನು **ಕರ್ನಾಟಕ ಮೆಟೀರಿಯಲ್ ಟೆಸ್ಟ್ ಹೌಸ್ ಪ್ರೈ.ಲಿ., ಬಸವೇಶ್ವರ ಲೇಔಟ್, ಬೆಂಗಳೂರು–94** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿರುತ್ತದೆ. ಸದರಿ ಪರೀಕ್ಷೆಯಲ್ಲಿ ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.

ಪು.ತಿ.ನೋ

ಕಾರ್ಯದರ್ಶಿಗಳು, ಈಸ್ಟ್ ವೆಸ್ಟ್ ಇಂಟರ್ ನ್ಯಾಷನಲ್ ಸ್ಕೂಲ್, ಹೂಟಗಳ್ಳಿ 2ನೇ ಹಂತ, ಮೈಸೂರುರವರು, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ:43:ಪಿಜಿಸಿ:2022 ದಿನಾಂಕ: 18.05.2022 ಆದೇಶದಂತೆ ನಗರ ಪ್ರದೇಶದ ಶಾಲೆಗೆ ರೂ.5,000/- ಶುಲ್ಕವನ್ನು ದಿನಾಂಕ:08.12.2022 ರಂದು ಬ್ಯಾಂಕ್ ಆಫ್ ಬರೋಡ, ಹೂಟಗಳ್ಳಿ ಶಾಖೆ, ಮೈಸೂರುರವರಿಂದ ಡಿ.ಡಿ.ಸಂಖ್ಯೆ:005156 ರಲ್ಲಿ ರೂ.5,000.00 ಗಳನ್ನು ಲೆಕ್ಕಶಾಖೆಗೆ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **ಕರ್ನಾಟಕ ಮೆಟಿರೀಯಲ್ ಟೆಸ್ಟ್ ಹೌಸ್ ಪ್ರೈ.ಲಿ., ಬಸವೇಶ್ವರ ಲೇಔಟ್, ಬೆಂಗಳೂರು-94** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದವರು ಪರಿಶೀಲಿಸಲಾಗಿ ಕಟ್ಟಡವು **"Structurally Stable"** ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡು ಬಂದಿರುತ್ತದೆ. ಪರಿವೀಕ್ಷಣಾ ಸಮಯದಲ್ಲಿ ತಿಳಿಸಿರುವಂತೆ ಅಗ್ನಿ ನಿರೋಧಕಕ್ಕೆ ಸಂಬಂಧಿಸಿದ್ದಂತೆ ಹತ್ತು ಸಾವಿರ ಸಾಮರ್ಥ್ಯವುಳ್ಳ ವಾಟರ್ ಟ್ಯಾಂಕ್ ಇರಬೇಕಿದ್ದು, ಹಾಲಿ ಇರುವ ಮೂರು ಸಾವಿರ ಸಾಮರ್ಥ್ಯವುಳ್ಳ ವಾಟರ್ ಟ್ಯಾಂಕ್ ಜೊತೆ ಹೆಚ್ಚುವರಿಯಾಗಿ ಏಳು ಸಾವಿರ ಸಾಮರ್ಥ್ಯವುಳ್ಳ ವಾಟರ್ ಟ್ಯಾಂಕ್‌ನ್ನು ಅಳವಡಿಸುವ ಷರತ್ತಿನೊಂದಿಗೆ ಸದರಿ ಕಟ್ಟಡಕ್ಕೆ 2022-23ನೇ ಶೈಕ್ಷಣಿಕ ಸಾಲಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ, ಮೈಸೂರು.